ಕಂ/ಉಪಲೋಕ್/ಬಿಡಿ/1661/2021
ಪಿ.ಓ.ಎ.ಆರ್.ಇ-5

**ಕರ್ನಾಟಕ ಲೋಕಾಯುಕ್ತ**

**ಕಂಪ್ಲೆಂಟ್/ಉಪಲೋಕ್/ಬಿಡಿ/1661/2021/ಪಿಓ.ಎ.ಆರ್.ಇ-5**
**ಮಂಡನಾಧಿಕಾರಿಯವರ ಶಾಖೆ.**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 24/02/2022.

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ: ಶ್ರೀ. ಸಿ.ಎನ್. ವಿನೋದ್ ಬಿನ್ ಸಿ.ಎನ್. ನರಸಪ್ಪ, ಪ್ರಥಮ ದರ್ಜೆ ಸಹಾಯಕರು, ತಹಶೀಲ್ದಾರ್ ಕಛೇರಿ, ಮುಳಬಾಗಿಲು, ಕೋಲಾರ ಜಿಲ್ಲೆ, ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.**

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ ಕೋಲಾರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ. **ಶ್ರೀ. ಸಿ.ಎನ್. ವಿನೋದ್ ಬಿನ್ ಸಿ.ಎನ್. ನರಸಪ್ಪ, ಪ್ರಥಮ ದರ್ಜೆ ಸಹಾಯಕರು, ತಹಶೀಲ್ದಾರ್ ಕಛೇರಿ, ಮುಳಬಾಗಿಲು, ಕೋಲಾರ ಜಿಲ್ಲೆ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಶ್ರೀ. ಆರ್. ಚಂದ್ರಪ್ಪ ಬಿನ್ ರಾಮಪ್ಪ, ಕೃಷ್ಣಗಿರಿ ಗ್ರಾಮ, ಮುಳಬಾಗಿಲು ತಾಲ್ಲೂಕು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ದೂರುದಾರರು ಬೋಡಿಬಂಡೆ ಹೊಸೂರು ಗ್ರಾಮ ಬೆಟ್ಟದಲ್ಲಿ ತೆಗೆದಿರುವ ಕಲ್ಲುಚಪ್ಪಡಿಗಳನ್ನು ಬೆಂಗಳೂರಿಗೆ ಸಾಗಿಸುವಾಗ ತನ್ನ ಲಾರಿಯನ್ನು ಹಿಡಿದು 10,000/-ರೂ. ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು, 8,000/- ರೂ.ಗಳಿಗೆ ಒಪ್ಪಿ, ದಿ: 04/12/2017 ರಂದು 3,000/- ರೂ.ಗಳನ್ನು ಪಡೆದುಕೊಂಡು, ಉಳಿದ 5,000/- ರೂ.ಗಳನ್ನು ಕೊಡುವಂತೆ ಅನೇಕ ಸಾರಿ ಫೋನ್ ಮಾಡಿ ಹಿಂಸೆ ಕೊಡುತ್ತಿದ್ದ ಬಗ್ಗೆ ದೂರು ಸಲ್ಲಿಸಿದ್ದು, ಸದರಿ ದೂರು ಕೋಲಾರ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 08/2017 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13 (1) (ಡಿ) ರೆ/ವಿ. 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರಾದ ನೀವು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ 3,000/-ರೂ. ಲಂಚ ಪಡೆದು ಉಳಿದ 5,000/- ರೂ.ಗಳಿಗೆ ದೂರುದಾರರಿಗೆ ಮೇಲಿಂದ ಮೇಲೆ ಫೋನ್ ಮಾಡಿ ಹಿಂಸೆ ಕೊಡುವ ಮೂಲಕ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ

1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

**2. ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಆರ್. ಚಂದ್ರಪ್ಪ ಬಿನ್ ರಾಮಪ್ಪ, ಕೃಷ್ಣಗಿರಿ ಗ್ರಾಮ, ಮುಳಬಾಗಿಲು ತಾಲ್ಲೂಕು** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ದಿ: 04/12/2017 ರಂದು ಬೋಡಿಬಂಡೆ ಹೊಸೂರು ಗ್ರಾಮ ಬೆಟ್ಟದಲ್ಲಿ ತೆಗೆದಿರುವ ಕಲ್ಲುಚಪ್ಪಡಿಗಳನ್ನು ದೂರುದಾರರು ಬೆಂಗಳೂರಿಗೆ ಸಾಗಿಸುವಾಗ ಕೋಲಾರ-ಮದ್ರಾಸ್ ಬೈಪಾಸ್ ರಸ್ತೆಯ ಕಾಂತರಾಜ್ ಸರ್ಕಲ್‌ನಲ್ಲಿ ಎದುರುದಾರರು ತನ್ನ ಲಾರಿಯನ್ನು ನಿಲ್ಲಿಸಿ, ತಾನು ತಹಶೀಲ್ದಾರ್ ಕಛೇರಿಯಲ್ಲಿ ಕೆಲಸ ಮಾಡುವುದಾಗಿ ಹೇಳಿ ಸಾಗಾಟಕ್ಕೆ ಲೈಸೆನ್ಸ್ ಇಲ್ಲವಾದ್ದರಿಂದ, ಲಾರಿಯನ್ನು ಪೊಲೀಸ್ ಸ್ಟೇಷನಿಗೆ ತೆಗೆದುಕೊಂಡು ಹೋಗಬೇಕಾಗುತ್ತದೆ ಮತ್ತು 25,000/- ರೂ. ದಂಡ ಹಾಕಿಸುತ್ತೇನೆಂದು ಹೇಳಿ, ಆರ್.ಸಿ. ಪುಸ್ತಕದ ಬಣ್ಣದ ಜೆರಾಕ್ಸ್ ಪ್ರತಿಯನ್ನು ಪಡೆದುಕೊಂಡಿರುತ್ತಾರೆ. ಅಕ್ರಮವಾಗಿ ಕಲ್ಲುಚಪ್ಪಡಿ ಸಾಗಿಸುತ್ತಿರುವುದಕ್ಕೆ 10,000/-ರೂ. ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು ದೂರುದಾರರನ್ನು ಹಾಗೂ ಅವರ ತಂದೆಯನ್ನು ಅಲ್ಲಿಯೇ ನಿಲ್ಲಿಸಿ, ಲಾರಿಯನ್ನು ಬಿಟ್ಟು ಕಳುಹಿಸಿ, ಲಂಚದ ಹಣ 10,000/- ರೂ. ಕೊಟ್ಟು ಆರ್.ಸಿ. ಪುಸ್ತಕವನ್ನು ತೆಗೆದುಕೊಂಡು ಹೋಗಲು ತಿಳಿಸಿರುತ್ತಾರೆ. ಹಣವನ್ನು ರೆಡಿ ಮಾಡಿದ ನಂತರ ತನಗೆ ಫೋನ್ ಮಾಡಲು ತಿಳಿಸಿ, ದೂರುದಾರರು ಹಾಗೂ ಅವರ ತಂದೆಯನ್ನು ಕಳುಹಿಸಿರುತ್ತಾನೆ. ಅದೇ ದಿನ ಸಾಯಂಕಾಲ ದೂರುದಾರರು ಎದುರುದಾರರಿಗೆ ಫೋನ್ ಮಾಡಿದಾಗ, ತನ್ನ ಬಳಿ ಹಣವಿಲ್ಲ ಮಕ್ಕಳ ವಡವೆ ಒತ್ತೆ ಇಟ್ಟು ಕೊಡಬೇಕು ಎಂದಾಗ, ಅದೆಲ್ಲಾ ಗೊತ್ತಿಲ್ಲ, 8,000/- ರೂ.ಗಳನ್ನಾದರೂ ಕೊಡಬೇಕೆಂದು ಹಾಗೂ ತನ್ನ ಬಳಿ ಇದ್ದಷ್ಟು ಹಣವನ್ನು ತಾಲ್ಲೂಕು ಕಛೇರಿ ಗೇಟ್‌ಬಳಿ ತಂದುಕೊಟ್ಟು ಹೋಗುವಂತೆ ತಿಳಿಸಿ, ಉಳಿದ ಹಣವನ್ನು ನಾಳೆ ಕೊಟ್ಟು, ಆರ್.ಸಿ.ಪುಸ್ತಕದ ಪ್ರತಿಯನ್ನು ತೆಗೆದುಕೊಂಡು ಹೋಗುವಂತೆ ತಿಳಿಸಿದ್ದು, ಸದರಿ ಸಂಭಾಷಣೆಯನ್ನು ತೆಲುಗು ಭಾಷೆಯಲ್ಲಿ ಮಾತನಾಡಿದ್ದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಅದೇ ದಿನ ತಹಶೀಲ್ದಾರ್ ಕಛೇರಿ ಆವರಣದಲ್ಲಿರುವ ಉಪನೋಂದಣಾಧಿಕಾರಿಗಳ ಕಛೇರಿ ಮುಂಭಾಗ ಚಿಕ್ಕಗೇಟ್ ಬಳಿ ಎದುರುದಾರರು 3,000/- ರೂ. ಲಂಚ ಪಡೆದುಕೊಂಡಿದ್ದಾರೆ. ನಂತರ ಬಾಕಿ 5,000/- ರೂ. ಹಣವನ್ನು ತಂದುಕೊಡುವಂತೆ ಮೇಲಿಂದ ಮೇಲೆ ದೂರುದಾರರಿಗೆ ಫೋನ್ ಮಾಡಿ ಹಿಂಸೆ ನೀಡಿರುತ್ತಾನೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ: 05/12/2017 ರಂದು ಕೋಲಾರ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.08/2017 ರಲ್ಲಿ ಕಲಂ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13 (1) (ಡಿ) ರೆ/ವಿ. 13(2) ಅಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶಿವಕುಮಾರ್ (ನೆರಳುಸಾಕ್ಷಿ) 2) ಆಯೂಬ್‌ಖಾನ್ ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ತಮ್ಮ ಮೊಬೈಲನ್ನು ಹಾಜರುಪಡಿಸಿದ್ದು, ಅದರಲ್ಲಿದ್ದ ಮೆಮೊರಿ ಕಾರ್ಡ್‌ನಲ್ಲಿದ್ದ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು 8,000/- ರೂ. ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ತನಿಖಾಧಿಕಾರಿಗಳು ಸದರಿ ಮೆಮೊರಿ ಕಾರ್ಡ್‌ನ್ನು ಮುಂದಿನ ತನಿಖೆಗೆ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಲಂಚ ನೀಡಲು ತಂದ ರೂ. 5000/- (500X10) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಬಿಳಿ ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಪೊಲೀಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಅಯೂಬ್‌ಖಾನ್‌ರವರ ಮೂಲಕ ದೂರುದಾರರ ಶರ್ಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಅಯೂಬ್‌ಖಾನ್‌ರವರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಶಿವಕುಮಾರ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಕೈಯಿಂದ ತಲೆ ಸವರಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ವಾಯ್ಸ್ ರೆಕಾರ್ಡರನ್ನು ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 05-12-2017 ರಂದು 11.00 ರಿಂದ ಮಧ್ಯಾಹ್ನ 12.30 ಘಂಟೆಯವರೆಗೆ ಕೋಲಾರ ಎಸಿಬಿ ಕಛೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ಕೋಲಾರವನ್ನು ಬಿಟ್ಟು ಮಧ್ಯಾಹ್ನ 1.30 ಘಂಟೆಗೆ ಮುಳಬಾಗಿಲು ಗ್ರಾಮವನ್ನು ತಲುಪಿ, ತಹಶೀಲ್ದಾರ್ ಕಛೇರಿಯಿಂದ ಸ್ವಲ್ಪ ದೂರದಲ್ಲಿ ವಾಹನವನ್ನು ನಿಲ್ಲಿಸಿ, ದೂರುದಾರರನ್ನು ಹಾಗೂ ನೆರಳುಸಾಕ್ಷಿಯನ್ನು ಎದುರುದಾರರು ಕೆಲಸ ಮಾಡುವ ಕಛೇರಿಯ ಒಳಗೆ ಕಳುಹಿಸಿ, ದಾಳಿ ತಂಡದವರು ಗೌಪ್ಯವಾಗಿ ಅಲ್ಲಲ್ಲಿ ಕಾರ್ಯಾಲಯದ ಸುತ್ತಮುತ್ತ ಸಂಶಯಬರದಂತೆ ನಿಂತಿರುತ್ತಾರೆ. ಎದುರುದಾರರು ಕಾರ್ಯಾಲಯದಲ್ಲಿ ಇಲ್ಲವಾದ್ದರಿಂದ, ಫೋನ್ ಮಾಡಲಾಗಿ, ತಾನು ಹೊರಗಡೆ ಇರುವುದಾಗಿ ಮತ್ತು ತಾನೇ ಫೋನ್ ಮಾಡುವುದಾಗಿ ತಿಳಿಸಿರುತ್ತಾನೆ. ಕಛೇರಿಯ ಅವಧಿ ಮುಗಿಯುವವರೆಗೂ ಕಾಯ್ದು ಕೋಲಾರಕ್ಕೆ ವಾಪಸ್ಸಾಗಿ, ಸಾಯಂಕಾಲ 6.00 ರಿಂದ 7 ಘಂಟೆ ಅವಧಿಯಲ್ಲಿ ಕೋಲಾರ ಎಸಿಬಿ ಕಛೇರಿಯಲ್ಲಿ ಆ ಬಗ್ಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ.

ದಿ: 28/02/2018 ರಂದು ಎಸಿಬಿ ಪೊಲೀಸ್ ಠಾಣೆಯಲ್ಲಿ ಪಂಚರನ್ನು ಬರಮಾಡಿಕೊಂಡು, ಸದರಿಯವರ ಸಮಕ್ಷಮ ದೂರುದಾರರನ್ನು ವಿಚಾರಿಸಲಾಗಿ, ತಾನು ಈ ಹಿಂದೆ ಎದುರುದಾರರನ್ನು ಭೇಟಿಯಾದಾಗ ತನ್ನಿಂದ ಲಂಚದ ಹಣವನ್ನು ಸ್ವೀಕರಿಸುವುದಿಲ್ಲವೆಂದು ಹೇಳಿರುವುದಾಗಿ ನುಡಿದಿದ್ದರಿಂದ, 5,000/- ಹಣವನ್ನು ದೂರುದಾರರಿಗೆ ವಾಪಸ್ಸು ನೀಡಲಾಗಿರುತ್ತದೆ.

ದಿ: 02/03/2018 ರಂದು ಕೋಲಾರ ಎಸಿಬಿ ಪೊಲೀಸ್ ಠಾಣೆಗೆ ದೂರುದಾರರು, ಎದುರುದಾರರು ಹಾಗೂ ತಹಶೀಲ್ದಾರ್ ಆದ ರೆಡ್ಡೆಪ್ಪ ಗುಪ್ತ ಇವರನ್ನು ಬರಮಾಡಿಕೊಂಡು, ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ತಹಶೀಲ್ದಾರ್‌ರವರಿಗೆ ಕೇಳಿಸಲಾಗಿ, ಸಂಭಾಷಣೆಯಲ್ಲಿದ್ದ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ. ಎದುರುದಾರರ ಮಾದರಿ ಧ್ವನಿಯನ್ನು ತೆಗೆದುಕೊಳ್ಳುವ ಸಲುವಾಗಿ ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಲಿಪಿಕರಿಸಿಕೊಂಡು ಅದನ್ನು ಎದುರುದಾರರಿಂದ ಓದಿಸುವ ಮೂಲಕ ಮಾದರಿ ಧ್ವನಿಯನ್ನು ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿಕೊಂಡು ನಂತರ ಸಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಅದೇ ರೀತಿ ದೂರುದಾರರ ಮಾದರಿ ಧ್ವನಿಯನ್ನು ಪಡೆದುಕೊಂಡಿರುತ್ತಾರೆ. ಈ ಕುರಿತಂತೆ ಕೋಲಾರ ಎಸಿಬಿ ಪೊಲೀಸ್ ಠಾಣೆಯಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆ.

ದಿ: 14/11/2019 ರಂದು ತನಿಖಾಧಿಕಾರಿಗಳು ಎದುರುದಾರರ ರಕ್ಷಣಾ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ದಿ: 09/09/2020 ರಂದು ತನಿಖಾಧಿಕಾರಿಗಳು ತಹಶೀಲ್ದಾರ್ ಕಛೇರಿಯ ಆವರಣದಲ್ಲಿರುವ ಉಪ-ನೋಂದಣಾಧಿಕಾರಿಯವರ ಕಛೇರಿಯ ಮುಂಭಾಗ ಇರುವ ಚಿಕ್ಕ ಗೇಟ್ ಬಳಿ ಎದುರುದಾರರು ಲಂಚದ ಹಣವನ್ನು ದೂರುದಾರರಿಂದ ಪಡೆದುಕೊಂಡ ಕುರಿತಂತೆ ಮಹಜರು ಕ್ರಮ ಜರುಗಿಸಿರುತ್ತಾರೆ.

iv) ಆರ್ಟಿಕಲ್ ನಂ.2 ರಲ್ಲಿ ಇದ್ದ ಎದುರುದಾರರ ಮಾದರಿ ಧ್ವನಿಯು ಮೊಬೈಲಿನ ಮೆಮೊರಿ ಕಾರ್ಡ್‌ನಲ್ಲಿದ್ದ ಪ್ರಶ್ನಿತ ಧ್ವನಿಯೊಂದಿಗೆ ಹೋಲಿಕೆಯಾಗುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ. ಅಲ್ಲದೇ, ಎದುರುದಾರರ ಮೇಲಾಧಿಕಾರಿಯಾದ ರೆಡ್ಡಪ್ಪ ಗುಪ್ತ ತಹಶೀಲ್ದಾರವರು ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಆಲಿಸಿ, ಸಂಭಾಷಣೆಯಲ್ಲಿಯ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ಸಲ್ಲಿಸಿದ್ದು, ಸಮಜಾಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ನನ್ನ ಧರ್ಮ ಪತ್ನಿಯ ಅನಾರೋಗ್ಯದ ನಿಮಿತ್ತ ದಿ: 04/12/2017 ರಂದು ಮತ್ತು ದಿ: 05/12/2017 ರಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡಿಸಲು ನಾನು ತಹಶೀಲ್ದಾರ್ ಸಾಹೇಬರಿಂದ ರಜೆ ಪಡೆದುಕೊಂಡಿರುತ್ತೇನೆ. ದಿ: 04/12/2017 ರಂದು ಮುಳಬಾಗಿಲು ತಾಲ್ಲೂಕು ಕೋಲಾರ-ಮದ್ರಾಸ್ ಬೈಪಾಸ್ ರಸ್ತೆಯ ಸಮೀಪ ಚಂದ್ರಪ್ಪರವರ ಲಾರಿಯನ್ನು ನಿಲ್ಲಿಸಿ, ಕಲ್ಲು ಸಾಗಾಣಿಕೆಗೆ ಪರವಾನಿಗಿ ತೋರಿಸಲು ನಾನು ಕೇಳಿರುವುದಿಲ್ಲ ಮತ್ತು ಲಾರಿಯ ಆರ್.ಸಿ ಪುಸ್ತಕವನ್ನು ನಾನು ಪಡೆದುಕೊಂಡು ಹೋಗಿರುವುದಿಲ್ಲ. ಚಂದ್ರಪ್ಪರವರ ತಂದೆಯವರನ್ನು ಸಹ ನಾನು ನೋಡಿರುವುದಿಲ್ಲ, ನಾನು ಮುಳಬಾಗಿಲು ಉಪನೊಂದಣಾಧಿಕಾರಿಗಳ ಕಚೇರಿಯ ಮುಂಭಾಗ ಇರುವ ಚಿಕ್ಕ ಗೇಟ್ ಸಮೀಪ 3,000/- ರೂ ಲಂಚದ ಹಣ ಪಡೆದುಕೊಂಡಿರುವುದಿಲ್ಲ. ನಾನು ಸಾರ್ವಜನಿಕ ನೌಕರರನಾಗಿದ್ದು, ಸುಮಾರು ಜನರು/ಸಾರ್ವಜನಿಕರು ಸರ್ಕಾರದ ವಿವಿಧ ಸೇವೆಗಳ ಬಗ್ಗೆ ಮಾಹಿತಿ ಪಡೆಯಲು, ವಿಚಾರ ಮಾಡಲು ನನಗೆ ಫೋನ್ ಮಾಡುತ್ತಿರುತ್ತಾರೆ. ನಾನು ಚಂದ್ರಪ್ಪರವರ ಮೊಬೈಲ್ ನಂಬರ್‌ನಿಂದ ನನ್ನ ಮೊಬೈಲ್‌ಗೆ ಕರೆಗಳು ಬಂದಿರುವ/ಹೋಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ದೂರುದಾರರು ನನ್ನ ವಿರುದ್ಧ ವಿನಾ ಕಾರಣ ದೂರು ದಾಖಲಿಸಿರುತ್ತಾರೆ ಎಂದು ನಿವೇದಿಸಿಕೊಂಡಿರುತ್ತಾರೆ.

ಕಂ/ಉಪಲೋಕ್/ಬಿಡಿ/1661/2021
ಪಿ.ಓ.ಎ.ಆರ್.ಇ–5

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಭರಿಸಲಾಗಿ, ಎದುರುದಾರರು ಮೇಲ್ಕಂಡಂತೆ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ. ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಬಲವಾದ ಹಾಗೂ ಸಮಂಜಸವಾದ ಆಧಾರಗಳಿರುವುದಿಲ್ಲ.

5. ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕ.ನಾ.ಸೇ. (ನಡತೆ) ನಿಯಮ, 1966, 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. ಆದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅನ್ವಯ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ 3 ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

24/2/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.